ಗುಳೇಗುಡ್ಡದ ಮತಕ್ಷೇತ್ರದಲ್ಲಿ 33 ಕೆ.ವಿ. ಸ್ಟೇಷನ್ ಸ್ಥಾಪಿಸುವ ಬಗ್ಗೆ.

3 (314) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇಗುಡ್ಡ) :— ಮಾನ್ಯ ಇಂಧನ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇಗುಡ್ಡ ಮತಕ್ಷೇತ್ರದ ಶಿರೂರ, ಗುಡೂರ ಗ್ರಾಮಗಳಲ್ಲಿ 33 ಕೆ.ವಿ. ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಆ ಕಾಮಗಾರಿಕೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು

ಇ) ಗುಳೇದಗುಡ್ಡ ನಗರಕ್ಕೆ ಮಂಜೂರಾದ 110 ಕೆ.ವಿ. ಸ್ಟೇಷನ್ನಿನ ಕಾಮಗಾರಿ ಈಗ ಯಾವ ಹಂತದಲ್ಲಿದೆ?

ಶ್ರೀ ಶರಣಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಗುಳೇದಗುಡ್ಡ ಮತಕ್ಷೇತ್ರದ ಶಿರೂರ ಗ್ರಾಮದಲ್ಲಿ ಒಂದು 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆ ಮಾಡುವ ಸಲುವಾಗಿ ತಾಂತ್ರಿಕ ವರದಿಯನ್ನು ಪಡೆದಿದ್ದು, ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಇದೇ ಮತಕ್ಷೇತ್ರದ ಗುಡೂರ ಗ್ರಾಮದಲ್ಲಿ ಒಂದು 33 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಜನವರಿ 1999ರಲ್ಲಿ ಅನುಮೋದನೆ ನೀಡಿದೆ.

ಆ) ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಮಂಜೂರು ಆದ ಕೂಡಲೇ ಶಿರೂರ ಗ್ರಾಮದಲ್ಲಿ 33 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಗುಡೂರ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33 ಕೆ.ವಿ. ಸಬ್ ಸ್ಟೇಷನ್ನಿನ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಮಂಡಳಿಯಿಂದ ಆಡಳಿತಾತ್ಮಕ ಮಂಜೂರಾತಿ ದೊರೆಯಬೇಕಾಗಿದ್ದು, ಇದು ದೊರೆತ ನಂತರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುತ್ತದೆ.

ಇ) ಹಾಲಿ ಗುಳೇದಗುಡ್ಡದಲ್ಲಿ 33:11 ಕೆ.ವಿ. ಸಬ್ ಸ್ಟೇಷನ್ ಕಾರ್ಯ ನಿರ್ವಹಿಸುತ್ತಿದೆ. ಈ ಜಾಗದಲ್ಲಿಯೇ 110ಕೆ.ವಿ. ಸಬ್-ಸ್ಟೇಷನ್ ಸ್ಥಾಪಿಸಲು ಸ್ಥಳಾವಕಾಶವು ಸಾಕಾಗುತ್ತಿಲ್ಲ. ಆದುದರಿಂದ ಸೂಕ್ತವಾದ ಬೇರೆ ಸ್ಥಳವನ್ನು ಅನ್ವೇಷಿಸಲಾಗುತ್ತಿದೆ. ಸೂಕ್ತವಾದ

ಸ್ಥಳವು ದೊರೆತ ನಂತರ ಭೂ ಸ್ವಾಧೀನದ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ರಾಜಶೇಖರ ಶೀಲವಂತ ವೀರಣ್ಣ:— ಮಾನ್ಯ ಅಧ್ಯಕ್ಷರೆ, ಶಿರೂರು ಮತ್ತು ಗುಡೂರು ಭಾಗದಲ್ಲಿ 33ಕೆ.ವಿ. ಸಬ್ ಸ್ಟೇಶನ್ ಸ್ಥಾಪನೆ ಮಾಡುವ ಸಲುವಾಗಿ ತಾಂತ್ರಿಕ ವರದಿ ಪಡೆದಿದ್ದು ಗ್ರಾಮೀಣ ವಿದ್ಯುದ್ದೀಕರಣ ನಿಗಮದಿಂದ ಸಾಲ ಸೌಲಭ್ಯ ಪಡೆಯಲು ಪ್ರಯತ್ನಿಸಲಾಗುತ್ತಿದೆ ಸಾಲ ಮಂಜೂರಾದ ಕೂಡಲೇ ಶಿರೂರ ಗ್ರಾಮದಲ್ಲಿ 33. ಕೆ.ವಿ. ಸಬ್ ಸ್ಟೇಶನ್ ನಿರ್ಮಾಣ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದೆಂದು ಹೇಳಿದ್ದಾರೆ. ನಾನು ಇದೇ ಪ್ರಶ್ನೆಯನ್ನು 1996-97 ನೇ ಸಾಲಿನಲ್ಲಿ ಕೇಳಿದಾಗ ತಾಂತ್ರಿಕ ಮಂಜುರಾತಿ ಸಿಕ್ಕಿದ ಕೂಡಲೇ ಶುರು ಮಾಡುತ್ತೇವೆಂದು ಆಗ ಕೂಡ ಹೇಳಿದ್ದಾರೆ. ಸ್ಪಷ್ಟವಾಗಿ ಯಾವಾಗ ಶುರು ಮಾಡುತ್ತಾರೆನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು. ನಮ್ಮ ಭಾಗದಲ್ಲಿ ಬಹಳ ಸಮಸ್ಯೆಯಿದೆ. ಅಲ್ಲಿ ಕಳಪೆ ವಿದ್ಯುತ್ ಬರುತ್ತಿದೆ. ಲಾಟೀನ್ ಚಿಮಣಿಎಣ್ಣೆ ದೀಪಗಳ ತರಹ ವಿದ್ಯುತ್ ದೀಪಗಳು ಕಾಣಿಸುತ್ತವೆ. ರಾತ್ರಿಹೊತ್ತಿನಲ್ಲಿ ವಿದ್ಯಾರ್ಥಿಗಳು ಓದುವುದಕ್ಕೆ ತೊಂದರೆಯಾಗಿದೆ. ಹಗಲುಹೊತ್ತಿನಲ್ಲಿ ಪಂಪ್ ಸೆಟ್ಟುಗಳ ಮೋಟಾರುಗಳು ಸುಟ್ಟುಹೋಗುತ್ತಿವೆ. ವಿದ್ಯುತ್ ಬಿಲ್ ತುಂಬುವುದಕ್ಕೆ ಆಗದೆ ಇರತಕ್ಕ ಸಂದರ್ಭದಲ್ಲಿ ಜನ ತೊಂದರೆಪಡುತ್ತಿದ್ದಾರೆ. ಬಹಳ ಸಮಸ್ಯೆಯಾಗಿದೆ. ಅದನ್ನು ಯಾವ ರೀತಿ ಬಗೆಹರಿಸುತ್ತೀರಿ ಎಂಬುದನ್ನು ಮಾನ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಶಾಲಾಕಾಲೇಜುಗಳ ಮಕ್ಕಳು ಕಳೆದ ಎರಡು ದಿವಸಗಳಿಂದ ಕಳಪೆ ವಿದ್ಯುತ್ ಪೂರೈಕೆಯಾಗುತ್ತಿರುವ ಬಗ್ಗೆ ಸತ್ಯಾಗ್ರಹ ಶುರು ಮಾಡಿದ್ದಾರೆ. ಈ ಬಗ್ಗೆ ಸಮರ್ಪಕವಾದ ಉತ್ತರವನ್ನು ಕೊಡಬೇಕು.

ಅಧ್ಯಕ್ಷರು :— ರಾಜಶೇಖರ ಶೀಲವಂತರವರೇ, ನಾನು ನಿಮಗೆ ಸಹಾಯ ಮಾಡುತ್ತೇನೆ ತಾವು ಕುಳಿತುಕೊಳ್ಳಿ. ಅವರು ಪ್ರಶ್ನೆ ಕೇಳಿದ ಮೂಲ ಉದ್ದೇಶ ಏನೆಂದರೆ, ನಮ್ಮ ವಿಧಾನ ಸಭೆಯ ಸದಸ್ಯತ್ವದ ಅವಧಿ ಅಂತ್ಯಕ್ಕೆ ಬರುತ್ತಿದೆ. ಬೇಗ ಮಾಡಿಕೊಟ್ಟರೆ ನನಗೆ ಅದರ ಕೀರ್ತಿ ಇರುತ್ತದೆ. ಜನರಲ್ಲಿ ಅದನ್ನು ಹೇಳಿಕೊಂಡರೆ ಪ್ರಯೋಜನವಾಗುತ್ತದೆ. ನೀವು ಏನು ಅನುಮೋದನೆ ದೊರಕಿದೆ, ವರದಿ ತಯಾರಾಗುತ್ತಿದೆ ಅಂದರೆ ಅದರಿಂದ ನನಗೇನೂ ಲಾಭವಿಲ್ಲ. ಆದ್ದರಿಂದ ಇದನ್ನು ತೀವ್ರಗತಿಯಿಂದ ಮಾಡಿಯೆಂದು ಕೇಳುತ್ತೀರಿ ಅಲ್ಲವೇ?

ಶ್ರೀ ರಾಜಶೇಖರ ಶೀಲವಂತ ವೀರಣ್ಣ:— ಹೌದು ಸ್ವಾಮಿ.

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಶಿರೂರು ಮತ್ತು ಗುಡೂರು ಗ್ರಾಮಗಳಿಗೆ ಈಗಾಗಲೇ ಎಲ್ಲಾ

ಮಂಜೂರಾತಿ ದೊರೆತಿದೆ. ಆದಷ್ಟುಬೇಗ ಏಪ್ರಿಲ್ ಕೊನೆ ಅಥವಾ ಮೇ ಮೊದಲು ವಾರದಲ್ಲಿ ಕೆಲಸ ಪ್ರಾರಂಭಮಾಡುತ್ತೇವೆ.

ಅಧ್ಯಕ್ಷರು :— ಏಪ್ರಿಲ್ ಮೇ ಒಳಗೆ ಮಾಡುತ್ತೇವೆಂದು ಹೇಳಿದ್ದಾರೆ, ತಾವು ಕೂಡಿ. ನಿಮಗೆ ಅನುಕೂಲವಾಗುತ್ತದೆ.

ಶ್ರೀ ರಾಜಶೇಖರ ಶೀಲವಂತ ವೀರಣ್ಣ :— ಜನರಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು :— ಹೌದು ಜನರ ಪ್ರತಿನಿಧಿ ಅಲ್ಲವೇ ನೀವು? ಒಳ್ಳೇ ಕತೆಯಾಯಿತು. ನಿಮ್ಮ ಅನುಕೂಲಕ್ಕೆ ನಾನು ಕೇಳಿದ್ದೇನೆ.

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಮಂಡಳಿಯ ಸಬ್ ಸ್ಟೇಷನ್ ಸ್ಥಾಪಿಸುವ ಬಗ್ಗೆ.

4 (236) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ರಂಗನಾಥಪುರದಲ್ಲಿ ಕೆಇಬಿ ಸಬ್-ಸ್ಟೇಷನ್ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆಯೇ?

ಆ) ತುಮಕೂರು ಜಿಲ್ಲೆ ಕೆ.ಜಿ. ಟಿಂಪಲ್ ವಿದ್ಯುತ್ ಉಪಸ್ಥಾವರದ ಕೇಂದ್ರವನ್ನು ತೆರೆಯಲು ಅನುಮತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ ಯಾವ ದಿನಾಂಕದಿಂದ ಅನುಮತಿ ನೀಡಲಾಗಿದೆ ಮತ್ತು ಯಾವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಇಲ್ಲ.

ಆ) ಹೌದು, ಮಂಡಳಿಯ ತಾಂತ್ರಿಕ ಸಮಿತಿಯು ಅನುಮೋದನೆ ನೀಡಿದೆ.

ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕಿನ ರಂಗನಾಥಪುರದಲ್ಲಿ ಕೆ.ಇ.ಬಿ. ಸಬ್-ಸ್ಟೇಷನ್‌ನ ಸ್ಥಾಪನೆಯ ಪ್ರಶ್ನೆ ಉದ್ಭವಿಸುವುದಿಲ್ಲ.